## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೆಗೌಡ ಇವರು ನಿಯಮ-72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಬಗ್ಗೆ.

ವಿಷಯ :- ಹೊಸದಾಗಿ 6 ರಿಂದ 8 ನೇ ತರಗತಿಯವರೆಗೆ ಪದವೀಧರ ಶಿಕ್ಷಕರನ್ನು ನೇಮಕಾತಿ ಮಾಡುವ ಸಂಬಂಧ ಪರಿಷ್ಕರಣೆಗೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳಿಂದಾಗಿ ಇಲಾಖೆಯಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ಪದವೀಧರ ಶಿಕ್ಷಕರಿಗೆ ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಹಾಗೂ ಸಕಾಲ ಸಚಿವರ ಗಮನ ಸೆಳೆಯಬಯಸುತ್ತೇನೆ.

### ಹೇಳಿಕೆ

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 07.08.2017ರ ಪ್ರಕಾರ ಜಾರಿಯಲ್ಲಿರುವ 'Karnataka Education Department Service (Department of Public Instrution) (Recruitment) (Amendment) Rules, 2017' ರಂತೆ ಒಟ್ಟು 6 ರಿಂದ 8 ನೇ ತರಗತಿಗಳ ಪದವೀಧರ ಶಿಕ್ಷಕರ ಹುದ್ದೆಗಳಲ್ಲಿ ಶೇ 75 ಪ್ರಮಾಣ ನೇರ ನೇಮಕಾತಿಗೆ ಹಾಗೂ ಶೇ 25 ಪ್ರಮಾಣ ಸೇವಾ ನಿರತರ ಶಿಕ್ಷಕರಿಂದ ನೇಮಕಾತಿಗೆ ನಿಗದಿಪಡಿಸಲಾಗಿರುತ್ತದೆ. ಹಾಗೆಯೇ, ಶೇ 25 ಪ್ರಮಾಣ ಸೇವಾ ನಿರತರ ಕೋಟಾದ ನೇಮಕಾತಿಗೆ ಇರುವ ಆಯ್ಕೆ ನಿಯಮಗಳ ವಿವರಗಳಿಗೆ ಸಂಬಂಧಿಸಿದ ಉದ್ಧೃತ ಭಾಗ ಈ ಕೆಳಕಂಡಂತಿದೆ.

**`` 66-A - `<u>Graduate Primary Teacher for 6 to 8 Pay Scale</u>**

***II. By In-Service Recruitment:-***

***(1) Eligibility :***

***(3) <u>Securing minimum fifty percent marks each in the prescribed competitive examination and in the additional paper or in section as notified for the concerned category of post</u> and medium of instruction.***

**Competitive Examination:-**

***(1) A Competitive examination for each category of posts listed at Serial number (i) to (iii) in column (2) and for different mediums of instructions <u>shall be conducted exclusively for the eligible in-service candidates</u>.***

***(2) The Competitive examinations for the respective three categories of posts specified at serial number (i) to (iii) in column (2) and for different mediums of instructions <u>may contain additional papers or sections as may be notified by the Government.</u>***

**(3) Selection Criteria :**

***The selection shall be based on the merit list prepared for the concerned category of posts and medium of instruction on the basis of derived percentages of marks secured in the above prescribed competitive examination, Graduate degree course and pre-service teacher education course with following wieghtages in the following manner ..........***

ಈ ಮೇಲೆ ನಿಗದಿಪಡಿಸಲಾಗಿರುವ ಮಾನದಂಡದಂತೆ ಶೇ 25 ರ ಸೇವಾ ನಿರತ ಕೋಟಾದಲ್ಲಿನ ಪದವೀಧರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರ ಆಯ್ಕೆಗೆ ಅವಕಾಶವಿದ್ದು ಈ ಕುರಿತಂತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹಮ್ಮಿಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, 1 ರಿಂದ 5ನೇ ವೃಂದದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಪರೀಕ್ಷೆಯನ್ನು ತೆಗೆದುಕೊಂಡು ಆಯ್ಕೆಯಾಗಲು ಅವಕಾಶವಿರುತ್ತದೆ.

ಶೈಕ್ಷಣಿಕ ಗುಣಾತ್ಮಕತೆಯ ದೃಷ್ಟಿಯಿಂದ ಸೇವಾ ನಿರತರ ಕೋಟಾದಡಿ ಆಯ್ಕೆಯಾಗಲು ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ಪ್ರಾಥಮಿಕ ಶಾಲಾ ವೃಂದ ಮತ್ತು ನೇಮಕಾತಿ ನಿಯಮದಡಿ ನಿಗದಿಪಡಿಸಲಾಗಿದೆ. ಕೇಂದ್ರ ಪಠ್ಯಕ್ರಮದ ಶಾಲೆಗಳಲ್ಲಿನ ಗುಣಾತ್ಮಕ ಶಿಕ್ಷಣಕ್ಕೆ ತತ್ಸಮಾನವಾಗಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿಯೂ ಬೋಧನಾ ಗುಣಮಟ್ಟವನ್ನು ಹೆಚ್ಚಿಸಲು ಅರ್ಹ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲು ಪರೀಕ್ಷಾ ವಿಧಾನದಿಂದ ಸಾಧ್ಯವಾಗುತ್ತದೆ. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದವು 2017 ರಿಂದ ಅಸ್ತಿತ್ವಕ್ಕೆ ಬಂದಿದ್ದು, 1 ರಿಂದ 5ನೇ ವೃಂದದಲ್ಲಿನ ಪದವೀಧರ ವಿದ್ಯಾರ್ಹತೆ ಹೊಂದಿರುವ ಎಲ್ಲಾ ಶಿಕ್ಷಕರಿಗೆ ಸದರಿ ಪದವೀಧರ ವೃಂದಕ್ಕೆ ಆಯ್ಕೆಯಾಗಲು ಪರೀಕ್ಷಾ ವಿಧಾನದಿಂದ ಸಮಾನ ಅವಕಾಶವಿರುತ್ತದೆ.

ಸಂಖ್ಯೆ : ಇಪಿ 1 ಪಿಎಂಎ 2020

(ಎಸ್. ಸುರೇಶ್‌ಕುಮಾರ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.